ಕಾಲೇಜು ಶಿಕ್ಷಣ ಇಲಾಖೆ

# ಸರಕಾರಿ ಮಹಾವಿದ್ಯಾಲಯ (ಸ್ವಾಯತ್ತ), ಕಲಬುರಗಿ

(ನ್ಯಾಕನಿಂದ "A" ಶ್ರೇಣಿಯ ಮಾನ್ಯತೆ ಪಡೆದಿದೆ)

ಸೇಡಂ ರಸ್ತೆ, ಕಲಬುರಗಿ – 585 105

Phone:08472-245064 www.gcak.ac.in

ಸಂಖ್ಯೆ:ಸಮವಿಕ/ಆಡಳಿತ/2020-21/ 769

ಪ್ರಾಂಶುಪಾಲರ ಕಚೇರಿ,
ಸರಕಾರಿ ಮಹಾವಿದ್ಯಾಲಯ,ಕಲಬುರಗಿ,
ದಿನಾಂಕ:07-10-2020.

## ಸ್ನಾತಕೋತ್ತರ ಕೋರ್ಸಗಳಿಗೆ ಪ್ರವೇಶ ಅಧಿಸೂಚನೆ

2020-21ನೇ ಶೈಕ್ಷಣಿಕ ಸಾಲಿಗಾಗಿ ಸರಕಾರಿ ಮಹಾವಿದ್ಯಾಲಯ(ಸ್ವಾಯತ್ತ)ಕಲಬುರಗಿಯ ಈ ಕೆಳಕಂಡ ಸ್ನಾತಕೋತ್ತರ ಕೊರ್ಸಗಳ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

| ಕ್ರ.ಸಂ | ಕೊರ್ಸ | ವಿಷಯ |
|---|---|---|
| 01 | ಎಂ.ಎ. | ಕನ್ನಡ,ಇಂಗ್ಲೀಷ,ಹಿಂದಿ,ಇತಿಹಾಸ,ಅರ್ಥಶಾಸ್ತ್ರ ರಾಜ್ಯಶಾಸ್ತ್ರ ಸಮಾಜಶಾಸ್ತ್ರ |
| 02 | ಎಂ.ಎಸ್ಸಿ | ಭೌತಶಾಸ್ತ್ರ,ಗಣಿತ,ಗಣಕವಿಜ್ಞಾನ,ಪ್ರಾಣಿಶಾಸ್ತ್ರ ಸೂಕ್ಷ್ಮಜೀವಶಾಸ್ತ್ರ |
| 03 | ಎಂ.ಕಾಂ. | - |

A. **ಅರ್ಹತೆಗಳು:**

1. **ಎಂ.ಎ(M.A)**

ಮಾನ್ಯತೆ ಪಡೆದ ವಿಶ್ವವಿದ್ಯಾಲಯ ಅಥವಾ ಸ್ವಾಯತ್ತ ಕಾಲೇಜಿನಿಂದ ಸ್ನಾತಕ ಪದವಿಯಲ್ಲಿ (ಬಿ.ಎ)ನಿಗದಿತ ವಿಷಯವನ್ನು ಐಚ್ಛಿಕವಾಗಿ ಅಧ್ಯಯನಮಾಡಿ ವಿಷಯದಲ್ಲಿ ಮತ್ತು ಪದವಿಯ ಸರಾಸರಿ 50% ಅಂಕಗಳೊಂದಿಗೆ ಪದವಿಯಲ್ಲಿ ಉತ್ತೀರ್ಣರಾಗಿರತಕ್ಕದ್ದು. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ವರ್ಗ-1ರ ಅಭ್ಯರ್ಥಿಗಳು ಕನಿಷ್ಠ 45% ಅಂಕಗಳೊಂದಿಗೆ ಉತ್ತೀರ್ಣರಾಗಿರತಕ್ಕದ್ದು.

ಭಾಷೆ ವಿಷಯಗಳಾದ ಕನ್ನಡ, ಇಂಗ್ಲೀಷ ಮತ್ತು ಹಿಂದಿ ಕೋರ್ಸಗಳಿಗೆ ಅಭ್ಯರ್ಥಿಗಳು ನಿಗದಿತ ವಿಷಯವನ್ನು ಐಚ್ಛಿಕವಾಗಿ ಅಥವಾ ಬೆಸಿಕ ತೆಗೆದುಕೊಂಡು ಓದಿದಲ್ಲಿ ಅರ್ಹರಾಗಿರುತ್ತಾರೆ. ಆದರೆ ಆಯ್ಕೆ ಸಂದರ್ಭದಲ್ಲಿ ಐಚ್ಛಿಕ ವಿಷಯವನ್ನು ತೆಗೆದುಕೊಂಡವರಿಗೆ ಆದ್ಯತೆ ನೀಡಲಾಗುವುದು.

2. **ಎಂ.ಎಸ್ಸಿ(M.Sc.)**

ಮಾನ್ಯತೆ ಪಡೆದ ವಿಶ್ವವಿದ್ಯಾಲಯ ಅಥವಾ ಸ್ವಾಯತ್ತ ಕಾಲೇಜಿನಿಂದ ಬಿ.ಎಸ್ಸಿ. ಪದವಿಯಲ್ಲಿ ಸರಾಸರಿಯಾಗಿ ಕನಿಷ್ಠ ಶೇಕಡಾ 50% ಅಂಕಗಳೊಂದಿಗೆ ಉತ್ತೀರ್ಣರಾಗಿರತಕ್ಕದ್ದು, ಆದರೆ, ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ಕ್ಕೆ ಸೇರಿದ ವಿದ್ಯಾರ್ಥಿಗಳು ಶೇಕಡಾ 45% ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಲ್ಲಿ ಅರ್ಹರಾಗಿರುತ್ತಾರೆ.

**2.1 ಎಂ.ಎಸ್ಸಿ ಗಣಕವಿಜ್ಞಾನ(M.Sc.)**

ಬಿ.ಎಸ್ಸಿ ಪದವಿಯಲ್ಲಿ ಗಣಕವಿಜ್ಞಾನ ಮಾಹಿತಿ ವಿಜ್ಞಾನ, ಮಾಹಿತಿ ತಂತ್ರಜ್ಞಾನ ವಿಷಯವನ್ನು ಐಚ್ಛಿಕವಾಗಿ ತೆಗೆದುಕೊಂಡು ಅಥವಾ ಬಿ.ಸಿ.ಎ. ಪದವಿಯನ್ನು ಮೇಲ್ಕಂಡ ಕನಿಷ್ಠ ಅಂಕಗಳೊಂದಿಗೆ ಉತ್ತೀರ್ಣರಾಗಿರುವರು ಅರ್ಹರಾಗಿರುತ್ತಾರೆ.

**2.2 ಎಂ.ಎಸ್ಸಿ ಸೂಕ್ಷ್ಮಜೀವಶಾಸ್ತ್ರ(M.Sc)**

ಬಿ.ಎಸ್ಸಿ ಪದವಿಯಲ್ಲಿ ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ, ಜೀವರಸಾಯನಶಾಸ್ತ್ರ, ಜೈವಿಕತಂತ್ರಜ್ಞಾನ, ಪೌಷ್ಠಕತೆ ವಿಷಯಗಳ ಐಚ್ಛಿಕವಾಗಿ ತೆಗೆದುಕೊಂಡು ಮೇಲೆ ತಿಳಿಸಿದ ಕನಿಷ್ಠ ಅಂಕಗಳೊಂದಿಗೆ ಉತ್ತೀರ್ಣರಾಗಿರುವವರು ಅರ್ಹರಾಗಿರುತ್ತಾರೆ.

**3. ಎಂ.ಕಾಂ(M.Com)**

ಬಿ.ಕಾಂ/ಬಿಬಿಎಂ/ಬಿಬಿಎ ಪದವಿಯಲ್ಲಿ ಕನಿಷ್ಠ 50% ಅಂಕಗಳನ್ನು (SC/ST/Cat-I 45 %) ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳು ಎಂ.ಕಾಂ ಪ್ರವೇಶಕ್ಕೆ ಅರ್ಹರಾಗಿರುತ್ತಾರೆ.

**ಬಿ. ಆಯ್ಕೆ ವಿಧಾನ:**

ಮೇಲ್ಕಂಡ ಸ್ನಾತಕೋತ್ತರ ಕೋರ್ಸಗಳಿಗೆ ಪ್ರವೇಶವನ್ನು ಕರ್ನಾಟಕ ಸರಕಾರದ ಚಾಲ್ತಿಯಲ್ಲಿರುವ (ಮೆರಿಟ್-ಮತ್ತು-ರೋಸ್ಟರ್) ನಿಯಮಗಳಿಗನುಗುಣವಾಗಿ ಮತ್ತು ಕಾಲೇಜು ನಿಗದಿಪಡಿಸಿದ ಕೋರ್ಸವಾರು ಅನುಗುಣವಾಗಿ ನೀಡಲಾಗುವುದು.

**ಸಿ:ಅಭ್ಯರ್ಥಿಗಳಿಗೆ ಸೂಚನೆಗಳು:**

1. ಮೇಲೆ ತಿಳಿಸಲಾದ ಸ್ನಾತಕೋತ್ತರ ಕೋರ್ಸಗಳ ಪ್ರವೇಶ ಪರೀಕ್ಷೆ ಬಯಸುವ ಅಭ್ಯರ್ಥಿಗಳು ಮಹಾವಿದ್ಯಾಲಯದ ಅಧಿಕೃತ ಅಂತರ್ಜಾಲ www.gcak.ac.in ತಾಣಕ್ಕೆ ಭೇಟಿಕೊಟ್ಟು ಆನ್ ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವುದು.
2. ಅಭ್ಯರ್ಥಿಯು ಪ್ರವೇಶ ಪಡೆಯಲಿಚ್ಛಿಸುವ ಪ್ರತಿಕೋರ್ಸಗೆ ಪ್ರತ್ಯೇಕವಾಗಿ ಆನ್ ಲೈನ್ ಮೂಲಕ ಅರ್ಜಿಸಲ್ಲಿಸಿ ನಿಗದಿತ ಶುಲ್ಕವನ್ನು ಪಾವತಿಸತಕ್ಕದ್ದು.
3. ಅರ್ಜಿ ಸಲ್ಲಿಸುವ ಪ್ರಕ್ರಿಯೆಯು ಅಭ್ಯರ್ಥಿಯು ಆನ್ ಲೈನ್ ಮೂಲಕ ಅರ್ಜಿಸಲ್ಲಿಸಿ ನಿಗದಿತ ಶುಲ್ಕವನ್ನು ಪಾವತಿಸಿ ಅರ್ಜಿಯ ಒಂದು ಮುದ್ರಿತ ಪ್ರತಿಯನ್ನು ಸಂಬಂಧಿಸಿದ ಎಲ್ಲಾ ದಾಖಲೆಗಳ ದೃಢೀಕೃತ ಪ್ರತಿಗಳೊಂದಿಗೆ ಕಾಲೇಜಿನ ಕಛೇರಿಗೆ ಅಂತಿಮ ದಿನಾಂಕದೊಳಗೆ ಸಲ್ಲಿಸಿದಾಗ ಮಾತ್ರ ಪೂರ್ಣವಾಗುತ್ತದೆ.
4. ವಿವಿಧ ಪ್ರವರ್ಗಗಳು, ವಿಶೇಷ ಪ್ರವರ್ಗಗಳು, ಅನುಚ್ಛೇದ(371ಜೆ) ಅಡಿಯಲ್ಲಿ ಪ್ರವೇಶ ಪಡೆಯಬಯಸುವ ಅಭ್ಯರ್ಥಿಗಳು ಸಂಬಂಧಿಸಿದ ಪ್ರಾಧಿಕಾರಗಳು ನೀಡುವ ಚಾಲ್ತಿಯಲ್ಲಿರುವ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿ ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು, ಯಾವುದೇ ಸಂದರ್ಭದಲ್ಲಿ ಅರ್ಜಿಸಲ್ಲಿಸಿದ ನಂತರ ಸಲ್ಲಿಸುವ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.
5. ಪದವಿ ಕೋರ್ಸಗಳ ಅಂತಿಮ ಸೆಮಿಸ್ಟರ ಪರೀಕ್ಷೆಗೆ ಹಾಜರಾಗಿರುವ ಅಭ್ಯರ್ಥಿಗಳು ಪ್ರವೇಶ ಅರ್ಜಿ ಸಲ್ಲಿಸಲು ಅರ್ಹರಾಗಿದ್ದು ಅಂತಹ ಅಭ್ಯರ್ಥಿಗಳು ಫಲಿತಾಂಶ ಪ್ರಕಟವಾದ 04 ಕೆಲಸದ ದಿನಗಳೊಳಗಾಗಿ ಅಂಕಪಟ್ಟಿ/ದೃಢೀಕೃತ ಅಂಕಪಟ್ಟಿಯ ಪ್ರತಿಯನ್ನು ಕಾಲೇಜಿನ ಕಚೇರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
6. ತಾತ್ಕಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ನಿಗದಿತ ಕೋರ್ಸಗಳಿಗೆ ಪ್ರವೇಶ ಪಡಯುವಾಗ ಪದವಿ ಕೋರ್ಸನ ಎಲ್ಲಾ ಅಂಕಪಟ್ಟಿಗಳು,ಮತ್ತು ಸಂಬಂಧಿಸಿದ ಎಲ್ಲಾ ದಾಖಲೆಗಳ ಮೂಲಪ್ರತಿಗಳನ್ನು ಕಡ್ಡಾಯವಾಗಿ ಹಾಜರುಪಡಸತಕ್ಕದ್ದು.

7. ಮೇಲೆ ತಿಳಿಸಿದ ಯಾವುದೇ ಸ್ನಾತಕೋತ್ತರ ಕೋರ್ಸಗಳಿಗೆ ಸರ್ಕಾರವು ನಿಗದಿಪಡಿಸಿದ ಪ್ರಮಾಣಕ್ಕಿಂತ ಕಡಿಮೆಸಂಖ್ಯೆಯಲ್ಲಿ ವಿದ್ಯಾರ್ಥಿಗಳು ದಾಖಲಾದಲ್ಲಿ ಅಂತಹ ಕೋರ್ಸಗಳ ಮುಂದುವರಿಕೆಯ ಬಗ್ಗೆ ಅಂತಿಮ ನಿರ್ಣಯ ಮಹಾವಿದ್ಯಾಲಯವು ಕೈಗೊಳ್ಳುತ್ತದೆ.
8. ಕೋರ್ಸವಾರು ಮತ್ತು ವರ್ಗವಾರು ಲಭ್ಯವಿರುವ ಸೀಟುಗಳ ಸಂಖ್ಯೆ, ಕೋರ್ಸಶುಲ್ಕಗಳಿಗಾಗಿ ಅಭ್ಯರ್ಥಿಗಳು ಕಾಲೇಜಿನ ಅಧಿಕೃತ ಜಾಲತಾಣ www.gcak.ac.in ಭೇಟಿನೀಡಿ ತಿಳಿದುಕೊಳ್ಳಬಹುದು.
9. ಮೇಲ್ಕಂಡ ಕೋರ್ಸಗಳ ಪ್ರವೇಶಕ್ಕೆ ಸಂಬಂಧಿಸಿದಂತೆ, ಕಾಲದಿಂದ ಕಾಲಕ್ಕೆ ನೀಡಲಾಗುವ ಮಾಹಿತಿಗಾಗಿ ಅಭ್ಯರ್ಥಿಗಳು ಕಾಲೇಜಿನ ಅಧಿಕೃತ ಜಾಲತಾಣದ ಸಂಪರ್ಕದಲ್ಲಿರಲು ಕಡ್ಡಾಯವಾಗಿ ಸೂಚಿಸಲಾಗಿದೆ.

10. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡವರನ್ನು ಸಂಪರ್ಕಿಸುವುದು.

| | | |
|---|---|---|
| For technical assistance | Amit Verma | 8310333240 |
| For other assistance | | |
| Faculty of Arts | Dr.Jyoti Keeranagi | 9611500789 |
| Faculty of Social Sciences | Dr.T.Gurubasappa R. | 9480175265 |
| Faculty of Science | Dr.Anis Fatima | 7892852184 |
| Faculty of Commerce | Dr.Kallinath Patil | 9741094346 |

ಡಿ.ಅರ್ಜಿ ಶುಲ್ಕ

| | |
|---|---|
| ಪರಿಶಿಷ್ಟ ಜಾತಿ,ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳಿಗೆ | ರೂ.200/- ಪ್ರತಿ ವಿಷಯಕ್ಕೆ |
| ಪ್ರವರ್ಗ-2ಎ,2ಬಿ,3ಎ,3ಬಿ ಮತ್ತು ಸಾಮಾನ್ಯ ವರ್ಗಕ್ಕೆ ಸೇರಿದ ಅಬ್ಯರ್ಥಿಗಳಿಗೆ | ರೂ.300/- ಪ್ರತಿ ವಿಷಯಕ್ಕೆ |

ಇ.ಪ್ರಮುಖ ದಿನಾಂಕಗಳು:

| | |
|---|---|
| ಆನ್ ಲೈನ್ ಅರ್ಜಿಸಲ್ಲಿಕೆ ಪ್ರಾರಂಭವಾಗುವ ದಿನಾಂಕ | 07-10-2020 |
| ಆನ್ ಲೈನ್ ಅರ್ಜಿಸಲ್ಲಿಸಲು ಕೊನೆಯ ದಿನಾಂಕ | 30-10-2020 |
| ಸಂಬಂಧಿಸಿದ ದಾಖಲೆಗಳ ದೃಢೀಕೃತ ಪ್ರತಿಗಳೊಂದಿಗೆ ಅರ್ಜಿಯ ಮುದ್ರಿತ ಪ್ರತಿ ಕಾಲೇಜಿನ ಕಚೇರಿಗೆ ಸಲ್ಲಿಸಲು ಅಂತಿಮ ದಿನಾಂಕ | 03-11-2020 |

ಪ್ರಾಂಶುಪಾಲರು PRINCIPAL
Govt. College (Autonomous)
Kalaburagi-585 105

Copy to:
1. Dean Academic (PG), Government College (Autonomous), Kalaburagi
2. Controller of Examinations, Government College (Autonomous), Kalaburagi
3. Head / Coordinators of all the PG depts., Government College (Autonomous), Kalaburagi
4. Coordinators, PG Admission Committee, Government College (Autonomous), Kalaburagi
5. Office Copy